ಹೀಗಾಗಿ ನೆಹರೂಗೆ ಇಷ್ಟವಿಲ್ಲದಿದ್ದರೂ ನೈತಿಕತೆಯನ್ನು ಎತ್ತಿಹಿಡಿಯುವ ಸಲುವಾಗಿ ಅವರ ರಾಜೀನಾಮೆಯನ್ನು ಸ್ವೀಕರಿಸಿದರು.

ತದನಂತರ ಮೊರಾರ್ಜಿ ದೇಸಾಯಿ ವಿತ್ತಮಂತ್ರಿಗಳಾಗಿ ಬಂದು ಐದು ವರ್ಷ ಕಾಲ ಅಧಿಕಾರ ನಡೆಸಿದ್ದರು. ಆದರೆ ಕಾಮರಾಜ್ ಯೋಜನೆಯಡಿ ಎಲ್ಲ ಮಂತ್ರಿಗಳೂ ರಾಜೀನಾಮೆ ಕೊಟ್ಟು ಪಕ್ಷದ ಮರುನಿರ್ಮಾಣಕ್ಕೆ ತೊಡಗಬೇಕು ಎಂದು ನಿರ್ಧರಿಸಿದಾಗ, ಮೊರಾರ್ಜಿ ಸಂಪುಟದಿಂದ ಹೊರಗಾದರು. ಆಗ ನೆಹರೂ ಮತ್ತೆ ಕೃಷ್ಣಮಾಚಾರಿಯವರತ್ತಲೇ ವಾಲಿದರು. ಎರಡನೇ ಬಾರಿ ವಿತ್ತ ಮಂತ್ರಿಗಳಾದಾಗ ದೊಡ್ಡ ಆರ್ಥಿಕ ಸಂಸ್ಥೆಗಳನ್ನು ಕೃಷ್ಣಮಾಚಾರಿ ಸ್ಥಾಪಿಸಿದರು. ನೆಹರೂ ತೀರಿಕೊಂಡು ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನ ಮಂತ್ರಿಗಳಾದಾಗ ಕೃಷ್ಣಮಾಚಾರಿಯವರ ಮೇಲಿದ್ದ ಕೃಪೆ ತೀರಿತ್ತು.

ಮೊರಾರ್ಜಿ ದೇಸಾಯಿ ತಮ್ಮದೇ ವಿಚಾರಧಾರೆಗಳಿದ್ದ, ಯಾರಿಗೂ ಬಗ್ಗದ ಮನುಷ್ಯ. ಅವರ ಕಾಲದಲ್ಲಿ ನೆಹರೂ ಜತೆ ಮತ್ತು ರಿಜರ್ವ್ ಬ್ಯಾಂಕಿನ ಜೊತೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಒಂದು ಮಟ್ಟದಲ್ಲಿ ಸಹಕಾರ, ಕೃಷಿ, ಗ್ರಾಮೀಣಾಭಿವೃದ್ಧಿಗೆ ಬ್ಯಾಂಕುಗಳ ಯೋಜನೆಗಳನ್ನು ಉಪಯೋಗಿಸಬೇಕು ಎಂದು ನಂಬಿದ್ದರು. ಸಹಕಾರ ವ್ಯವಸ್ಥೆ ಬೆಳೆಯಬೇಕೆಂದು ಶ್ರಮಿಸಿದರು. ಅವರ ಕಾಲದಲ್ಲಿ ಹಿಂದಿನ ಸಂಸ್ಥಾನಗಳಲ್ಲಿ ಏರ್ಪಡಿಸಿದ್ದ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿ, ಸ್ಟೇಟ್ ಬ್ಯಾಂಕಿನಡಿಯಲ್ಲಿ ಅದರ ಅಂಗಸಂಸ್ಥೆಯಾಗಿ ತರಲಾಯಿತು. ಅನೇಕ ಖಾಸಗಿ ಬ್ಯಾಂಕುಗಳು ಅವರ ಕಾಲದಲ್ಲಿ ದಿವಾಳಿ ತೆಗೆದವು. ಆದರೂ ಮೊರಾರ್ಜಿಯವರಿಗೆ ಬ್ಯಾಂಕುಗಳನ್ನು ರಾಷ್ಟ್ರೀಕರಿಸಬೇಕೆನ್ನುವ ಗಟ್ಟಿ ನಂಬಿಕೆ ಇರಲಿಲ್ಲ. ಬದಲಿಗೆ ನಿಯಮಗಳನ್ನು ರೂಪಿಸುವುದರಿಂದ ಬ್ಯಾಂಕುಗಳನ್ನು ಸಾಮಾಜಿಕ ಬದ್ಧತೆಗೆ ಒಳಪಡಿಸಬೇಕೆಂದು ನಂಬಿದವರು. ನೆಹರೂ ಮಂತ್ರಿಮಂಡಲದಿಂದ ಕಾಮರಾಜ್ ಯೋಜನೆಯಡಿ ಹೊರಬಿದ್ದ ಮೊರಾರ್ಜಿ, ಇಂದಿರಾಗಾಂಧಿಯವರ ನೇತೃತ್ವದಲ್ಲಿ ಮತ್ತೆ ವಿತ್ತಮಂತ್ರಿಗಳಾಗಿದ್ದರು. ಬ್ಯಾಂಕುಗಳ ರಾಷ್ಟ್ರೀಕರಣದ ಸಮಯಕ್ಕೆ ಇಂದಿರಾ ಮೊರಾರ್ಜಿಯವರೊಂದಿಗೆ ಸಮಾಲೋಚಿಸದೆ ವಿತ್ತವಿಭಾಗವನ್ನು ತಮ್ಮ ಕೈಗೆ ತೆಗೆದುಕೊಂಡಾಗ ಉಪಪ್ರಧಾನಿ ಮತ್ತು ವಿತ್ತಮಂತ್ರಿಗಳಾಗಿದ್ದ ಮೊರಾರ್ಜಿ ರಾಜೀನಾಮೆ ಕೊಟ್ಟರು.

ಲಾಲ್ ಬಹದ್ದೂರ್ ಶಾಸ್ತ್ರಿಗಳ ವಿತ್ತಮಂತ್ರಿಗಳಾಗಿದ್ದ ಸಚೀಂದ್ರ ಚೌಧುರಿ ವಿತ್ತಮಂತ್ರಿಗಳಾಗಿದ್ದುದು ಕೇವಲ ಒಂದು ವರ್ಷಕಾಲ ಮಾತ್ರ. ಅವರ ಸಮಯದಲ್ಲಿ ಆದ ದೊಡ್ಡ ಘಟನೆ ರೂಪಾಯಿಯ ಅಪಮೌಲ್ಯ. ಆದರೆ ಅವರು ಅಧಿಕಾರ ಬಿಡುವುದಕ್ಕೆ ಕಾರಣ ಚುನಾವಣೆ ಮತ್ತು ಹೊಸ ಸಚಿವ ಸಂಪುಟದ ಏರ್ಪಾಟೇ ಆಗಿತ್ತು.

ಮೊರಾರ್ಜಿ ದೇಸಾಯಿ ಎರಡನೆಯ ಬಾರಿ ವಿತ್ತ ಮಂತ್ರಿಗಳ ಪದವಿಯನ್ನು ಬಿಟ್ಟುಕೊಟ್ಟಾಗ ವಿತ್ತವಿಭಾಗವನ್ನು ಇಂದಿರಾ ಗಾಂಧಿಯೇ ನಿರ್ವಹಿಸಿದರು. ಅವರ ಅತಿ ದೊಡ್ಡ ಸಾಧನೆ ಬ್ಯಾಂಕುಗಳ ರಾಷ್ಟ್ರೀಕರಣ. ಇಂದಿರಾ ನಂತರ ಬಂದದ್ದು ಯಶವಂತರಾವ್ ಚವಾಣ್. ನಾಲ್ಕು ವರ್ಷಗಳ ಕಾಲ ವಿತ್ತ ಮಂತ್ರಿಯಾಗಿ ಚವಾಣ್ ಸೇವೆ ಸಲ್ಲಿಸಿದರು. ಅವರ ಅಧಿಕಾರವಧಿಯಲ್ಲಿ ದೊಡ್ಡ ಮಟ್ಟದ ಬದಲಾವಣೆಗಳಾಗಲೀ ಹಗರಣಗಳಾಗಲೀ ಆಗಲಿಲ್ಲ. ಮಂತ್ರಿಮಂಡಲದ ಪುನರ್ರಚನೆಯಾದಾಗ ಸಿ. ಸುಬ್ರಮಣ್ಯಂ ಅವರಿಗೆ ವಿತ್ತ ಮಂತ್ರಾಲಯ ಹೋಯಿತು. ಅವರ ಕಾಲದಲ್ಲಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಯಾಯಿತು. ತುರ್ತು ಪರಿಸ್ಥಿತಿಯಲ್ಲಿ ಅವರು ವಿತ್ತ ಮಂತ್ರಿಗಳಾಗಿದ್ದರು. 1977ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತಾಗ ಸುಬ್ರಮಣ್ಯಂರ ಅಧಿಕಾರವಧಿ ಮುಗಿದಿತ್ತು.

ಸ್ವಾತಂತ್ರಾನಂತರ ತುರ್ತುಪರಿಸ್ಥಿತಿಯವರೆಗೆ ಮೂಲಭೂತ ವಿಚಾರಧಾರೆ ಸಮಾಜವಾದದತ್ತಲೇ ವಾಲಿತ್ತು. ಸರ್ಕಾರ ವಿತ್ತೀಯ ಕ್ಷೇತ್ರದಲ್ಲಿ ಹೆಚ್ಚಿನ ಪಾತ್ರ ವಹಿಸಬೇಕೆನ್ನುವ ನಂಬಿಕೆ ಬಲವಾಗಿ ಇತ್ತು. ನಮ್ಮ ವಿತ್ತಮಂತ್ರಿಗಳ ಯಾದಿಯಲ್ಲಿ ಪರಿಣಿತರೂ, ರಾಜಕಾರಣಿಗಳೂ ಇದ್ದರು. ಈಗಿನ ಚೌಕಟ್ಟಿಗೂ ಆಗಿನದ್ದಕ್ಕೂ ಇರುವ ಸಾಮ್ಯ ಸರ್ಕಾರ ಮತ್ತು ರಿಜರ್ವ್ ಬ್ಯಾಂಕಿನ ನಡುವೆ ಇರುವ ತಲ್ಲಣ. ಒಳ್ಳೆಯ ಅರ್ಥಶಾಸ್ತ್ರಕ್ಕೂ ರಾಜಕೀಯ ತುರ್ತಿಗೂ ಇರುವ ತಲ್ಲಣ. ಎರಡೂ ವಿಚಾರಗಳು ಆಗಲೂ ಇದ್ದುವು. ಈಗಲೂ ಇವೆ. ●